**2 ನೇ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃಗೋಕಾಕ**

**ಸಿ.ಸಿ ನಂ. 468/2013**

ದಿಃ **03-10-2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

ಚಾ.ಸಾ-3 ಪ್ರಾ.ಸಾ-2

| | | |
|---|---|---|
| ಹೆಸರು | : | ಭಾಸ್ಕರ ಮಲ್ಲಪ್ಪಾ ತಳಗುಂಜಿ |
| ತಂದೆ ಹೆಸರು | : | ಮಲ್ಲಪ್ಪಾ ತಳಗುಂಜಿ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಫಾರ್ಮಸಿ ಕೆಲಸ |
| ವಾಸಸ್ಥಳ | : | ಗೋಕಾಕ |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ-2 ರವರ ಪರಿಚಯವಿರುದಿಲ್ಲ. ಆರೋಪಿ ಪರಿಚಯವಿಲ್ಲ.

ಪೊಲೀಸರು ನಮ್ಮನ್ನು ಪಂಚನಾಮೆಗೆ ಕರೆದಿಲ್ಲ. ನಮ್ಮ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಯಾವುದೇ ವಸ್ತುಗಳನ್ನು ಜಪ್ತು ಪಡಿಸಿಕೊಂಡಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ. ಸಾಕ್ಷಿಗೆ ಜಪ್ತಿ ಪಂಚನಾಮೆಯನ್ನು ತೋರಿಸಲಾಗಿ ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿದಾರರನ್ನಾಗಿ ಪರಿಗಣಿಸಲು ಮಾನ್ಯ ಸ.ಸ.ಅ. ಅವರು ಅನುಮತಿ ಕೋರಿದ್ದು, ಪರಿಶೀಲಿಸಿ ನೋಡಿ ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಸ.ಸ.ಅ. ಅವರಿಂದಃ</u>**

ದಿಃ 20.07.2012 ರಂದು ಬೆಳಿಗ್ಗೆ 11-45 ರಿಂದ 12-45 ಗಂಟೆವರೆಗೆ ಪೊಲೀಸರು ನನ್ನನ್ನು ಮತ್ತು ಚಾಸಾ-2 ರವರ ಸಮಕ್ಷಮ ದಾಳಿ ಪಂಚನಾಮೆ ಬರೆದು ಕಪ್ಪು ಬಣ್ಣದ ರಬ್ಬರ ಟ್ಯೂಬನಲ್ಲಿದ್ದ 25 ಲೀಟರ ಕಳ್ಳಭಟ್ಟಿ ಸರಾಯಿಯನ್ನು ಜಪ್ತಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಜಪ್ತಿಪಡಿಸಿದ ಕಳ್ಳಭಟ್ಟಿ ಸರಾಯಿಯ ಪೈಕಿ 180 ಎಂ.ಎಲ.ನ ಕಳ್ಳಭಟ್ಟಿ ಸರಾಯಿಯನ್ನು ರಸಾಯನಿಕ ಪ್ರಯೋಗಕ್ಕಾಗಿ ಬೇರ್ಪಡಿಸಲಾಗಿತ್ತು ಎಂದರೆ ಸರಿಯಲ್ಲ. ಘಟನಾ ಸ್ಥಳದಿಂದ ವಾಹನ ಸಂಃ ಕೆಎ-23 ಇ 6299 ನೇದ್ದನ್ನು ಜಪ್ತಿಪಡಿಸಿಕೊಂಡಿರುತ್ತಾರೆ ಎಂರದೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ಮಾಹಿತಿ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಇಲ್ಲಾ ಎಂದು ತಿಳಿಸಿರುತ್ತಾರೆ.

**<u>ಮರು ವಿಚಾರಣೆಃ</u>** --ಇಲ್ಲಾ--

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

**(ಶ್ರೀ. ಅಭಿನಯ)**

**c/c 2ನೇ ಹೆ.ದಿ.&ನ್ಯಾ.ದಂ.,ಗೋಕಾಕ.**